ವಿದ್ಯುತ್ ಸ್ಥಾವರಗಳ ಕುರಿತು

2382 - ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯುತ್ ಸ್ಥಾವರಗಳ ಸಂಖ್ಯೆ ಎಷ್ಟು? ಇದರಿಂದ ಎಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ?

ಆ) ಹೊಸದಾಗಿ ಎಷ್ಟು ಸ್ಥಾವರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ?

ಇ) ವಿದ್ಯುತ್ ಪೂರೈಕೆಗಾಗಿ ರೈತರು ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು? ಇವುಗಳಲ್ಲಿ ಎಷ್ಟು ಜನರಿಗೆ ವಿದ್ಯುತ್ ಪೂರೈಸಲಾಗುತ್ತದೆ?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿರುವ ವಿದ್ಯುತ್ ಸ್ಥಾವರಗಳ ಸಂಖ್ಯೆ ಮತ್ತು ಉತ್ಪಾದನೆ ಈ ಕೆಳಕಂಡಂತಿದೆ.

1. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಹೊಂದಿರುವ ವಿದ್ಯುತ್ ಸ್ಥಾವರಗಳು ಮತ್ತು ಅವುಗಳ ಉತ್ಪಾದನೆ (1996-97)

ವಿದ್ಯುತ್ ಸ್ವಾವರಗಳು	-	6
ವಿದ್ಯುತ್ ಉತ್ಪಾದನೆ	-	966 ದಶಲಕ್ಷ ಯೂನಿಟ್‌ಗಳು

2. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಹೊಂದಿರುವ ವಿದ್ಯುತ್ ಸ್ಥಾವರಗಳು ಮತ್ತು ಅವುಗಳ ಉತ್ಪಾದನೆ

ವಿದ್ಯುತ್ ಸ್ಥಾವರಗಳು	-	15
ಉತ್ಪಾದನೆ	-	11892 ದಶಲಕ್ಷ ಯೂನಿಟ್‌ಗಳು

ಆ) 1997-98ನೇ ಸಾಲಿನಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಕಾರ್ಯ ಯೋಜನೆಯಲ್ಲಿ 3 ಘಟಕಗಳು ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭ ಮಾಡುವ ನಿರೀಕ್ಷೆಯಿದೆ.

1. ಕದ್ರಾ 2ನೇ ಘಟಕ	-	50 ಮೆ.ವ್ಯಾ
2. ಕೊಡಸಳ್ಳಿ 1ನೇ ಘಟಕ	-	40 ಮೆ.ವ್ಯಾ
3. ಭದ್ರಾ ಯೋಜನೆ	-	6 ಮೆ.ವ್ಯಾ
ಒಟ್ಟು	-	**96 ಮೆ.ವ್ಯಾ**

ಅಲ್ಲದೆ ಭಾರತ ಸರ್ಕಾರದ ನೀತಿಗನುಗುಣವಾಗಿ ಕರ್ನಾಟಕ ಸರ್ಕಾರವು ಸಹ ವಿದ್ಯುತ್ ಉತ್ಪಾದನೆಯನ್ನು ಖಾಸಗಿ ವಲಯಕ್ಕೆ ಮುಕ್ತಗೊಳಿಸಿದೆ. ಕರ್ನಾಟಕ ಸರ್ಕರವು ಖಾಸಗಿ ವಲಯದಲ್ಲಿ

31 ವಿದ್ಯುತ್ ಉತ್ಪಾದನೆ ಯೋಜನೆಗಳ ನಿರ್ಮಾಣಕ್ಕೆ ಅನುಮತಿ ನೀಡಿದ್ದು ಇವುಗಳಿಂದ ಒಟ್ಟು 8300 ಮೆ.ವ್ಯಾ ಗಳ ಉತ್ಪಾದನೆಯನ್ನು ಮುಂಬರುವ ವರ್ಷಗಳಲ್ಲಿ ನಿರೀಕ್ಷಿಸಲಾಗಿದೆ.

ಇ) 1997ರ ಮಾರ್ಚ್ ತಿಂಗಳ ಅಂತ್ಯದವರೆಗೆ ವಿದ್ಯುತ್ ಪೂರೈಕೆಗಾಗಿ ರೈತರು ಸಲ್ಲಿಸಿದ್ದ ಅರ್ಜಿಗಳಲ್ಲಿ 103712 ಅರ್ಜಿಗಳು ಬಾಕಿ ಇವೆ. 97-98ನೇ ಸಾಲಿನಲ್ಲಿ 40,000 ಪಂಪುಸೆಟ್ಟುಗಳ ವಿದ್ಯುದೀಕರಣದ ಗುರಿಯನ್ನು ಮಂಡಳಿಯು ನಿಗದಿಪಡಿಸಿದ್ದು ಈ ವರ್ಷದ ಜುಲೈ ಅಂತ್ಯಕ್ಕೆ 8567 ಪಂಪುಸೆಟ್‌ಗಳ ವಿದ್ಯುದೀಕರಿಸಲಾಗಿದೆ. ಉಳಿದ ಪಂಪುಸೆಟ್ಟುಗಳ ನಿಯಮಾನುಸಾರವಾಗಿ ಹಂತ ಹಂತವಾಗಿ ವಿದ್ಯುದೀಕರಿಸಲಾಗುವುದು.

1997-98ರಲ್ಲಿ ಸಾರಾಯಿ ಮಾರಾಟ ಕುರಿತು

2386 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಸಾರಾಯಿ ಮಾರಾಟದ ಹಕ್ಕನ್ನು ಯಾವ ರೀತಿಯಿಂದ ನೀಡಲು ಸರ್ಕಾರವು ತೀರ್ಮಾನಿಸಿದೇ?

ಆ) ಪ್ರತಿ ಅಂಗಡಿಯನ್ನು ಟೆಂಡರ್ ಅಥವಾ ಹರಾಜಿನ ಮೂಲಕ ಡಿಕ್ರಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ? (ವಿವರಗಳನ್ನು ಒದಗಿಸುವುದು)

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) 1997-98ನೇ ಅಬಕಾರಿ ವರ್ಷದಲ್ಲಿ ದಿನಾಂಕ 1.7.97ರಿಂದ 31.7.97ರವರೆಗೆ 1996-97ನೇ ಸಾಲಿನ ಅಬಕಾರಿ ಗುತ್ತಿಗೆದಾರರೇ ಆ ವರ್ಷದ ಬಾಡಿಗೆ ಮೊತ್ತಕ್ಕೆ ಗುತ್ತಿಗೆ ನಿರ್ವಹಿಸಲು ಮುಂದುವರೆಸಲಾಗಿತ್ತು. ದಿನಾಂಕ 1.8.97 ರಿಂದ 31.10.97ರ ಅವಧಿಗೆ ಸಾರಾಯಿ ಚಿಲ್ಲರೆ ಮಾರಾಟದ ಗುತ್ತಿಗೆ ಹಕ್ಕನ್ನು ಹರಾಜು ಮೂಲಕ ವಿಲೇ ಮಾಡಲು ಅನುಮತಿ ನೀಡಿದೆ. ಅಬಕಾರಿ ವರ್ಷದ ಉಳಿದ ಅವಧಿಗೆ ಅನುಸರಿಸಬೇಕಾದ ನೀತಿ ಕುರಿತು ಸಚಿವ ಸಂಪುಟದ ಉಪ ಸಮಿತಿಯ ಪರಿಗಣನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಖಾಸಗಿಯವರಿಗೆ ಅಬಕಾರಿ ಡಿಸ್ಟ್ರಿಬೂಟರ್ಸ್ ಲೈಸನ್ಸ್ ವಿತರಣೆ

2387 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಅಬಕಾರಿ ಡಿಸ್ಟ್ರಿಬ್ಯೂಟರ್ಸ್ ಲೈಸನ್ಸ್ (ಸಿವಿಲ್-2) ಅನ್ನು ಖಾಸಗಿಯವರಿಗೆ ನೀಡಲು ಸರ್ಕಾರವು ನಿರ್ಧರಿಸಿರುವುದು ನಿಜವೇ?